ರಾಜೀವ್ ಚಂದ್ರಶೇಖರ್
ಸಂಸತ್ ಸದಸ್ಯರು

25ನೇ ಜೂನ್ 2014

**ಸನ್ಮಾನ್ಯ ಸಿದ್ದರಾಮಯ್ಯರವರೇ,**

ಇತ್ತೀಚೆಗೆ ಬೆಂಗಳೂರು ನಗರದ ಯುನೊ-ಇನ್ ರೆಸ್ಟೋರೆಂಟ್ ನಲ್ಲಿ ಭಾರತೀಯರ ವಿರುದ್ಧ ತಾರತಮ್ಯ ನಡೆದಿರುವ ಆಘಾತಕಾರಿ ವಿವರಗಳು ಮಾಧ್ಯಮದಲ್ಲಿ ವರದಿಯಾಗಿರುವ ಹಿನ್ನಲೆಯಲ್ಲಿ ಆ ಕುರಿತು ತಮ್ಮ ಗಮನವನ್ನು ಸೆಳೆಯಲು ಈ ಪತ್ರವನ್ನು ಬರೆಯುತ್ತಿದ್ದೇನೆ. ಈ ರೆಸ್ಟೋರೆಂಟ್ ನಲ್ಲಿ ಹೇಗೆ ಒಂದು ನಿರ್ದಿಷ್ಟ ದೇಶದವರನ್ನು ಓಲೈಸಲು, ಅಲ್ಲಿಗೆ ಬರುವ ಭಾರತೀಯರ ವಿರುದ್ಧವೆ ತಾರತಮ್ಯವೆಸೆಗಲಾಗುತ್ತಿದೆಯೆಂಬುದನ್ನು ವರದಿ ವಿವರಿಸುತ್ತಿದೆ.

ಇಂದಿನ ಯುಗದಲ್ಲಿ, ನಮ್ಮ ರಾಜ್ಯದ ರಾಜಧಾನಿಯಲ್ಲಿರುವ ಒಂದು ರೆಸ್ಟೋರೆಂಟ್, ನಮ್ಮ ನಾಗರೀಕರ ವಿರುದ್ಧವೆ ಭೇದಭಾವ ಎಣಿಸುವ ದಿಟ್ಟತನವನ್ನು ಪ್ರದರ್ಶಿಸುತ್ತಿದೆ ಎಂದರೆ ಇದು ನಿಜಕ್ಕೂ ದಿಗ್ಭ್ರಮೆಗೊಳಿಸುವ ಸಂಗತಿಯಾಗಿದೆ. ನಮ್ಮ ರಾಜಧಾನಿ ಬೆಂಗಳೂರಿನಲ್ಲಿ, ನಮ್ಮ ಜನರ ವಿರುದ್ಧ ನಡೆಯುತ್ತಿರುವ "ಭಾರತೀಯರಿಗೆ ಪ್ರವೇಶವಿಲ್ಲ" ಎಂಬ ಅಸಮರ್ಥನೀಯ, ಅತಿರೇಕದ ಉದ್ಧಟತನಗಳ ವಿರುದ್ಧ ತಕ್ಷಣವೆ ಕಠಿಣ ಕ್ರಮತೆಗೆದುಕೊಂಡು ಮತ್ತೆಂದೂ ನಗರದಲ್ಲಿ ಇಂತಹ ಅವಿವೇಕಿತನಗಳಿಗೆ ಆಸ್ಪದವಾಗದಂತೆ ನೋಡಿಕೊಳ್ಳಬೇಕು. ಯಾವ ಸನ್ನಿವೇಶದಲ್ಲಿಯೂ ಕೂಡ ಜಾತಿ, ಧರ್ಮ ಅಥವಾ ರಾಷ್ಟ್ರೀಯತೆಯ ಆಧಾರದಲ್ಲಿ ತನ್ನಲ್ಲಿ ಬರುವ ಅತಿಥಿಗಳಿಗೆ ಪ್ರವೇಶ ನಿರಾಕರಿಸುವ ಅಥವಾ ಬೇಧಭಾವವೆಸಗುವ ಅಧಿಕಾರ ಯಾವ ರೆಸ್ಟೋರೆಂಟ್ ಅಥವಾ ಹೋಟೆಲ್ ಗಳಿಗಾಗಲಿ ಇಲ್ಲ ಮತ್ತು ಇದು ಐಪಿಸಿ ನಿಯಮಗಳ ಸ್ಪಷ್ಟ ಉಲ್ಲಂಘನೆಯಾಗಿದೆ.

ಇಂತಹ ಅತಿರೇಕದ ಘಟನೆಗಳು ಈ ನೆಲದ ಕಾನೂನನ್ನು ಸ್ಪಷ್ಟವಾಗಿ ಉಲ್ಲಂಘಿಸುತ್ತಿರುವುದರಿಂದ, ಸರ್ಕಾರ ಇದನ್ನು ಗಂಭೀರವಾಗಿ ಪರಿಗಣಿಸಿ ಕಾನೂನಿನನ್ವಯ ಸೂಕ್ತ ಕ್ರಮಗಳನ್ನು, ಅತಿ ಶೀಘ್ರವೆ ತೆಗೆದುಕೊಳ್ಳಬೇಕೆಂದು

…2..

11ನೇ ಮಹಡಿ, ದೊಡ್ಡ ಗೋಪುರ, ಸರ್.ಎಂ.ವಿಶ್ವೇಶ್ವರಯ್ಯ ಕೇಂದ್ರ, ಡಾ. ಅಂಬೇಡ್ಕರ್ ವೀಧಿ, ಬೆಂಗಳೂರು - 560 001.
ದೂರವಾಣಿ : 91-80-22863600, ದೂರವಾಣಿ / ಫ್ಯಾಕ್ಸ್ : 91-80-22863680
ಅಂತರ್ಜಾಲ ವಿಳಾಸ : rajeev.c@nic.in
www.rajeev.in / ham:VU2RCL

ಈ ಮೂಲಕ ಒತ್ತಾಯಿಸುತ್ತಿದ್ದೇನೆ. ಈ ಪ್ರಕರಣದಲ್ಲಿ ಸರ್ಕಾರದ ಪ್ರತಿಕ್ರಿಯೆಯು, ನಮ್ಮ ನಗರದಲ್ಲಿ ಮತ್ತೆ ಹೀಗೆ ಕಾನೂನನ್ನು ಉಲ್ಲಂಘಿಸಿ ಬೇಧಭಾವವೆಸಗುವ ಎಲ್ಲರಿಗೂ ಸ್ಪಷ್ಟ ಸಂದೇಶ ರವಾನಿಸುವಂತಿರಬೇಕು.

ಈ ಕುರಿತು ತಮ್ಮ ಶೀಘ್ರ ಪ್ರತಿಕ್ರಿಯೆಗಳನ್ನು ಎದುರುನೋಡುತ್ತಿದ್ದೇನೆ.

ತಮ್ಮ ವಿಶ್ವಾಸಿ,

**ರಾಜೀವ್ ಚಂದ್ರಶೇಖರ್**

**ಶ್ರೀ ಸಿದ್ದರಾಮಯ್ಯರವರು**
ಸನ್ಮಾನ್ಯ ಮುಖ್ಯಮಂತ್ರಿಗಳು
ಕರ್ನಾಟಕ ಸರ್ಕಾರ
ಬೆಂಗಳೂರು

**<u>ಪ್ರತಿಯನ್ನು ಸೂಕ್ತ ಕ್ರಮಕ್ಕಾಗಿ:-</u>**

1. ಶ್ರೀ ರಾಮಲಿಂಗಾರೆಡ್ಡಿ, ಮಾನ್ಯ ಸಾರಿಗೆ ಸಚಿವರು ಮತ್ತು ಬೆಂಗಳೂರು ನಗರ ಉಸ್ತುವಾರಿ ಸಚಿವರು, ವಿಧಾನ ಸೌಧ, ಬೆಂಗಳೂರು
2. ಶ್ರೀ ಎಂ ಲಕ್ಷ್ಮಿನಾರಾಯಣ, ಭಾ.ಆ.ಸೇ., ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಎನ್.ಆರ್.ವೃತ್ತ, ಬೆಂಗಳೂರು